1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 1948-2021

**ಸಿ.ಡಬ್ಲ್ಯು -13, ಪಿ.ಡಬ್ಲ್ಯು-9**

**ಸಾಕ್ಷಿದಾರರ ಹೆಸರು** : ವಿನಾಯಕ ಎನ್.
ತಂದೆಯ **ಹೆಸರು** : ನೀಲಕಂಠ ಪಿ. ನಾಯಕ್
**ವಯಸ್ಸು** : 40 ವರ್ಷ
**ಉದ್ಯೋಗ** : ಡಿ.ವೈ.ಎಸ್.ಪಿ., ಲೋಕಾಯುಕ್ತ ಬೆಂಗಳೂರು
**ವಾಸ** : ಬೆಂಗಳೂರು

ದೃಶ್ಯ ಸಮ್ಮೇಳನದ ಮೂಲಕ ಕರೆಯಿಸಿ **ಪ್ರಮಾಣೀಕರಿಸಿದ ದಿನಾಂಕ :13.07.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು ದಿ:04.06.2020 ರಿಂದ ದಿ:09.11.2022 ರವರೆಗೆ ಸಾಗರದಲ್ಲಿ ಡಿ.ವೈ.ಎಸ್.ಪಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ:23.09.2020 ರಂದು ಚಾಸ 12 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಅದೇ ದಿನ ಚಾಸ 7 ರವರು ತೋರಿಸಿದ ಸ್ಥಳದಲ್ಲಿ, ಚಾಸ 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯ ಕ್ರಮವನ್ನು ಮಧ್ಯಾಹ್ನ 2.10 ರಿಂದ 3.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಪೋಟೋ ತೆಗೆದಿರುತ್ತೇನೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ.

3. ದಿ:04.10.2020 ರಂದು ಚಾಸ 1 ರವರು ಹಾಜರುಪಡಿಸಿದ ಸಿ.ಡಿ.ಯನ್ನು ಚಾಸ 4 ಮತ್ತು 5 ರವರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತೇನೆ. ಜಪ್ತುಪಡಿಸಿಕೊಂಡ ಸಿ.ಡಿ. ಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್. ಅನ್ನು ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸ 1 ರವರು ಹಾಜರುಪಡಿಸಿದ ಸಿ.ಡಿ.ಗೆ ಸಂಬಂಧಿಸಿದಂತೆ 65 ಬಿ ಪ್ರಮಾಣ ಪತ್ರವನ್ನು ಚಾಸ 1 ರವರಿಂದ ಪಡೆದು ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸ 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿ:15.10.2020 ರಂದು ಚಾಸ 10 ರವರು ನೀಡಿದ ಚಾಸ 1, 6 ರಿಂದ 9 ರವರ ಕರ್ತವ್ಯ ದಿನಚರಿಯ ದೃಢೀಕೃತ ನಕಲನ್ನು ಪಡೆದು ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಚಾಸ 10 ರವರು ನೀಡಿದ ಗಿಣಿವಾರ ಗ್ರಾಮದ ಸರ್ವೇ ಸಂಖ್ಯೆ 17 ಸರ್ಕಾರಿ ಜಾಗದ ಒತ್ತುವರಿ ತೆರವಿನ ಆದೇಶದ ಪ್ರತಿಯನ್ನು ಸ್ವೀಕರಿಸಿ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

5. ದಿ:05.11.2020 ರಂದು 2 ರಿಂದ 4 ನೇ ಆರೋಪಿತರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸನ್ನು ನೀಡಿರುತ್ತೇನೆ.

6. ದಿ:12.11.2020 ರಂದು 1 ನೇ ಆರೋಪಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸನ್ನು ನೀಡಿರುತ್ತೇನೆ.

7. ದಿ:13.11.2020 ರಂದು 1 ರಿಂದ 4 ನೇ ಆರೋಪಿತರು ನನ್ನ ಮುಂದೆ ಹಾಜರಾಗಿ ವಿಚಾರಣಾ ನೋಟೀಸ್ ಗೆ ಉತ್ತರವನ್ನು ನೀಡಿರುತ್ತಾರೆ. ಅದೇ ದಿನ ಚಾಸ 7 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

8. ದಿ:27.02.2020 ರಂದು ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಸೂಕ್ತ ಸಾಕ್ಷಾಧಾರಗಳು ದೊರೆತಿದ್ದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

9. ಸಾಕ್ಷಿಯು ನಿಪಿ 3 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 5 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತುಗಳ ಪಟ್ಟಿ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸ್ವತ್ತುಗಳ ಪಟ್ಟಿಯನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚರಿಗೆ ನೀಡಿದ ನೋಟೀಸ್ ಗಳು ಮತ್ತು ಅವುಗಳ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಪಂಚರಿಗೆ ನೀಡಿದ ನೋಟೀಸ್ ಗಳನ್ನು ನಿಪಿ 9 ಮತ್ತು 10 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು 2 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 12 ಮತ್ತು 13 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ:14.09.2020 ಹಾಗೂ 16.10.2020 ರ ಪತ್ರಗಳ ದೃಢೀಕೃತ ನಕಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 14 ಮತ್ತು 15 ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸ 10 ರವರು ನೀಡಿರುವ ಕರ್ತವ್ಯ ದೃಢೀಕರಣ ಪತ್ರ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕರ್ತವ್ಯ ದೃಢೀಕರಣ ಪತ್ರವನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರಿಗೆ ನೀಡಿರುವ ನೋಟೀಸ್ ಗಳು ಮತ್ತು ಅದರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಆರೋಪಿತರಿಗೆ ನೀಡಿದ ನೋಟೀಸ್ ಗಳನ್ನು ನಿಪಿ 17 ರಿಂದ 19 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 17(ಎ) ಯಿಂದ 19(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ</u>

1. ಘಟನಾ ಸ್ಥಳ ನಮ್ಮ ಠಾಣೆಯಿಂದ 16 ಕಿ ಮೀ ಅಂತರದಲ್ಲಿರುತ್ತದೆ. ಘಟನಾ ಸ್ಥಳಕ್ಕೆ ಪಂಚನಾಮೆಗೆ ನಾವು ಎಷ್ಟು ಜನ ಹೋಗಿದ್ದೆವು ಎಂದು ನೆನಪಿಲ್ಲ. ಪಂಚನಾಮೆಯ ಸಮಯದಲ್ಲಿ ಘಟನಾ ಸ್ಥಳದಲ್ಲಿ ಬೇರೆ ಯಾರೂ ಸಹ ಜನರು ಇರಲಿಲ್ಲ. ಸರ್ವೇಸಂಖ್ಯೆ 17 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಮತ್ತೊಂದು ಪ್ರಕರಣದಲ್ಲಿ ಪಡೆದಿರುತ್ತೇನೆ. ಸರ್ವೇ ಸಂಖ್ಯೆ 17 ರ ಪಹಣಿ ಪತ್ರಿಕೆಯನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವುದಿಲ್ಲ. ಘಟನಾ ಸ್ಥಳದಲ್ಲಿ ಯಾವ ಸಸಿಗಳನ್ನು ನೆಡಲಾಗಿತ್ತು ಎಂದು ದಾಖಲೆಯನ್ನು ನೋಡಿ ಹೇಳಬಲ್ಲೆ. ಯಾವ ಸಸಿ ಎಂದು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಮನೆ ಕಟ್ಟಲು ಬಳಸಿದ ಪೋಲ್ಸ್ ಮತ್ತು ಕಂಬ ಹಾಗೂ ಸಿಮೆಂಟ್ ಶೀಟ್ ಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಒತ್ತುವರಿ ಜಾಗವನ್ನು ಸರ್ವೇ ಅಧಿಕಾರಿಯ ಮೂಲಕ ಸರ್ವೇ ಮಾಡಿಸಿರುವುದಿಲ್ಲ.

2. ಘಟನಾ ಸ್ಥಳದಿಂದ ಸುಮಾರು ಎಷ್ಟು ದೂರದಲ್ಲಿ ಪಂಚರು ಸಿಕ್ಕರು ಎಂದು ನನಗೆ ಹೇಳಲು ಆಗುವುದಿಲ್ಲ. ಚಾಸ 1 ಹಾಜರುಪಡಿಸಿದ ವೀಡಿಯೋ ಚಿತ್ರೀಕರಣದ ನೈಜತೆಯನ್ನು ತಿಳಿಯಲು ಎಫ್.ಎಸ್.ಎಲ್. ಗೆ ಕಳುಹಿಸಿರುವುದಿಲ್ಲ. ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಚಾಸ 1 ಆ ದಿನ ಕರ್ತವ್ಯ ನಿರ್ವಹಿಸಿದರು ಎಂದು ಚಾಸ 10 ನೀಡಿದ ವರದಿಯನ್ನು ಆಧರಿಸಿ ತಿಳಿಸಿರುತ್ತೇನೆ.

ಆರೋಪಿತರ ಯಾವುದೇ ತಪ್ಪು ಇಲ್ಲದೇ ಇದ್ದರೂ ಚಾಸ 1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.